

ಈಶ್ವರ

# ಸಾಮಾಜಿಕ ಜಾಲತಾಣ ಮತ್ತು ಅಪಮಾನ

**ಆನ್‌ಲೈನ್ ಕಿರುಕುಳಕ್ಕೆ ಯುವಪೀಳಿಗೆಯೇ ಹೆಚ್ಚು ಬಲಿಯಾಗುತ್ತಿದೆ. ಅಪಮಾನ ಸಹಿಸಲಾಗದೆ, ಕೆಲವರು ಡಿಪ್ರೆಷನ್ ಗೆ ಒಳಗಾಗಿದ್ದಾರೆ. ಅವಮಾನದಿಂದ ಊರೇ ಬಿಟ್ಟವರಿದ್ದಾರೆ. ವಿಪರೀತಕ್ಕೆ ಹೋಗಿ, ಜೀವ ಕಳೆದುಕೊಂಡವರೂ ಇದ್ದಾರೆ.**

■ **ಚೈತ್ರ ಹೆಗಡೆ**

ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಹಾಗೂ 22ರ ಹರೆಯದ ಮೊನಿಕಾ ಲೆವೆನ್‌ಸ್ಕಿ ದಿನನಿತ್ಯ ಪತ್ರಿಕೆಗಳಿಗೆ ಆಹಾರವಾಗ ತೊಡಗಿದ್ದ ಆ ಸಂದರ್ಭವನ್ನು ಒಮ್ಮೆ ನೆನಪಿಸಿಕೊಳ್ಳಿ. ಆಗ ಜಾಲತಾಣಗಳಲ್ಲಿ ಅದೆಷ್ಟು ಬಣ್ಣ ಬಣ್ಣದ ಕಥೆಗಳು ಸೃಷ್ಟಿಯಾದವು!

ಅದಕ್ಕೆ ಪ್ರತಿಯಾಗಿ ಸಾರ್ವಜನಿಕರ ಅಭಿಪ್ರಾಯಗಳು, ಘನತೆಗೆ ಧಕ್ಕೆ ತರುವಂತಹ ಹೀನಾಯಕರವಾದ ಪ್ರತಿಕ್ರಿಯೆಗಳು ಬರತೊಡಗಿದವು. ಘಟನೆ ನಡೆದ ಬಳಿಕ ಕ್ಲಿಂಟನ್‌ರ ವಿಚಾರಣೆ ನಡೆಯಿತಾದರೂ ಅವರ ಅಧ್ಯಕ್ಷ ಗಾದಿಗೇನೂ ಕುತ್ತು ಬರಲಿಲ್ಲ. ಆದರೆ, ಮೋನಿಕಾ ಜೀವನ ಮಾತ್ರ ಪಾತಾಳಕ್ಕಿಳಿದು ಹೋಗಿತ್ತು. ರಾತ್ರೋರಾತ್ರಿ ಅದೆಷ್ಟು (ಕು)ಖ್ಯಾತಿ ಗಳಿಸಿದ್ದಳೆಂದರೆ, 20 ವರ್ಷ ಕಳೆದರೂ ಇಂದಿಗೂ ಮೊನಿಕಾ ಎಲ್ಲೇ ಹೋದರೂ ಆ ಕಹಿಘಟನೆಯ ನೆನಪು ಹಿಂಬಾಲಿಸುತ್ತಲೇ ಇದೆ.